ದಿನಾಂಕಃ 16.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **1** ರಿಂದ **4** ಮತ್ತು **6** ನೇ ಪ್ರತಿವಾದಿಗಳ ಪರ ವಕೀಲರಿಂದಃ

15. ದಿಃ26.12.1975 ರಿಂದ 1988 ರವರೆಗೆ ನಾವೇ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದೇವೆ. ಆಗ ನೀವು ನೌಕರಿಯಲ್ಲಿ ಇದ್ದಿರಿ ಎಂದರೆ ಸಾಕ್ಷಿ ನಾನು ನೌಕರಿಯಲ್ಲಿ ಇದ್ದರೂ ಸಹ ನನ್ನ ತಮ್ಮ ಸುಣದೊಳ್ಳಿಯಲ್ಲಿ ವೈದ್ಯರಾಗಿದ್ದು, ವ್ಯವಸಾಯವನ್ನು ಬೇರೆಯವರ ಕಡೆಯಿಂದ ಮಾಡಿಸುತ್ತಿದ್ದರು ಎನ್ನುತ್ತಾರೆ. 1975 ರಿಂದ 1988 ರವರೆಗೆ ಯಾರು ಸಾಗುಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ 1975 ರಿಂದ 1988 ರವರೆಗೆ ನನ್ನ ತಾಯಿ ಮಾಡಿಸುತ್ತಿದ್ದರು, ನನ್ನ ತಾಯಿ ಮೃತಪಟ್ಟ ನಂತರ ವಿಜಯಕುಮಾರ ನನ್ನ ತಮ್ಮರವರು ವ್ಯವಸಾಯ ಮಾಡಿಸುತ್ತಿದ್ದಾರೆ ಎನ್ನುತ್ತಾರೆ. ನನ್ನ ತಾಯಿ ಪ್ರಹಲ್ಲಾದಪ್ಪ ಚನ್ನಬಸಪ್ಪ ನಾವಿರವರಿಂದ ವ್ಯವಸಾಯ ಮಾಡಿಸುತ್ತಿದ್ದೇನೆ ಎಂದು ನನಗೆ ಹೇಳುತ್ತಿದ್ದರು. ಅವರು ದಿಃ27.08.2002 ರಲ್ಲಿ ಮೃತಪಟ್ಟಿದ್ದಾರೆ. ಅವರೇ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆಗಳು ನನ್ನ ಬಳಿ ಇಲ್ಲ. ಅವರಿಗೆ ಮಕ್ಕಳು ಇದ್ದಾರೆ, ಅವರನ್ನು ಸಾಕ್ಷ್ಯಮಾಡಿಸುವುದಿಲ್ಲ. ನಿಮ್ಮ ತಮ್ಮರವರ ವೈದ್ಯ ವೃತ್ತಿ ಬಹಳ ಚೆನ್ನಾಗಿ ನಡೆಯುತ್ತಿದ್ದ ಕಾರಣ ಅವರು ವ್ಯವಸಾಯದ ಕಡೆ ಗಮನ ಹರಿಸುತ್ತಿರಲಿಲ್ಲ ಎಂದರೆ ಸಾಕ್ಷಿ ಅವರು ಆಯುರ್ವೇದ ವೈದ್ಯರು ಆಗಿದ್ದು, ಅವರ ಕೆಲಸ ಅಷ್ಟಕಷ್ಟೆ ಇತ್ತು ಎನ್ನುತ್ತಾರೆ.

16. 1975 ರಿಂದ 1988 ರವರೆಗೆ ನಿಂಗಪ್ಪ ಸಾಯನ್ನವರ್‌ರವರು ಯಾವುದೇ ತೊಂದರೆ ಇಲ್ಲದೆ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ಮೃತಪಟ್ಟಾಗಿನಿಂದ ಇವತ್ತಿನವರೆಗೂ ನಾನಾಗಲಿ, ನನ್ನ ತಮ್ಮನಾಗಲಿ, ನನ್ನ ತಾಯಿಯಾಗಲಿ ಯಾರು ಸಹ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪ ಸಾಯನ್ನವರ್‌ರವರು ಆ ರೀತಿ ವ್ಯವಸಾಯ ಮಾಡುವುದು ನಮ್ಮ

ಊರಿನ ಎಲ್ಲಾ ಜನರಿಗೂ, ನಮಗೂ ಸಹ ಗೊತ್ತಿದೆ ಎಂದರೆ ಸರಿಯಲ್ಲ. ಅವರನ್ನು ಬಿಡಿಸಲು ಆಗುವುದಿಲ್ಲ ಎಂದು ತಿಳಿದ ನಂತರ ಈ ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಅವರನ್ನು ಹೊಲ ಬಿಡಿ ಎಂದು ನಾನು ಹೋಗಿ ಕೇಳಿದಾಗ ಅವರು ಕೊಡಲಿ ಹಿಡಿದುಕೊಂಡು ನೀವು ನಿಮ್ಮ ಅಣ್ಣತಮ್ಮಂದಿರು ತಾಕತ್ ಇದ್ದರೆ ನಮ್ಮನ್ನು ಬಿಡಿಸಿ ಎಂದು ಹೇಳಿ ನಾವು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಹೇಳಿದರು ಎನ್ನುತ್ತಾರೆ. ಆಗ ನಾನು ಎಸ್.ಐ ರವರಿಗೆ ಅರ್ಜಿ ಕೊಟ್ಟೆ, ಅವರು ನನ್ನನ್ನು ಸಂದರ್ಶನಕ್ಕೆ ಕರೆದರು, ಅವರನ್ನು ಕರೆಸಿ ಜಮೀನಿನ ಸ್ವಾಧೀನವನ್ನು ನಮಗೆ ಕೊಡಿ ಎಂದು ಹೇಳಿದರು, ಈ ವಿಚಾರವನ್ನೆಲ್ಲಾ ಬರವಣಿಗೆಯಲ್ಲಿ ಮಾಡಿದ್ದು, ಅದರ ನಕಲನ್ನು ನನಗೆ ಕೊಟ್ಟಿದ್ದಾರೆ.

17. ಪೋಲಿಸ್ ಠಾಣೆಗೆ ನಿಂಗಪ್ಪ ಸಾಯನ್ನವರ್, ಸತ್ಯಪ್ಪ ರಾಮಪ್ಪ ನಾಯಕ್, ಕಂಬಣ್ಣ ಸಿದ್ದಪ್ಪ ದಳವಾಯಿ ಮತ್ತು ವಿಠ್ಠಲ್ ಕುರೆಬೇಟ್ ರವರು ಬಂದಿದ್ದರು ಸಾಕ್ಷಿ ನಾನು ಹೋದಾಗ ಬಂದಿರಲಿಲ್ಲ ಎನ್ನುತ್ತಾರೆ. ನೀವು ಕಾಗದವನ್ನು ಹಾಜರು ಪಡಿಸಿದ್ದೀರಿ ಅಲ್ಲವಾ ಎಂದರೆ ಸಾಕ್ಷಿ ನಂತರ ನಾನು ಹೋಗಿ ತೆಗೆದುಕೊಂಡೆ ಎನ್ನುತ್ತಾರೆ. ಆ ದಾಖಲೆಯನ್ನು ಓದಿದ ನಂತರ ಹಾಜರು ಪಡಿಸಿದ್ದೇನೆ. ನಿಪಿ30 ರಲ್ಲಿ ಸಾಯನ್ನವರ್‌ರವರು ಹೇಳಿಕೆ ಕೊಟ್ಟಿದ್ದು, ನಾವೇ ಜಮೀನನ್ನು ಸಾಗುವಳಿ ಮಾಡುತ್ತಿದ್ದೇವೆ ಎಂದು ಅದರಲ್ಲಿ ಹೇಳಿದ್ದಾರೆ. 50 ವರ್ಷದಿಂದ ಸಾಯನ್ನವರ್‌ರವರೇ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದು ಪೋಲಿಸ್ ರ ಮುಂದೆ ಅವರು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿ.

18. 1988 ರಿಂದ 2014 ರವರೆಗೆ ನಾವು ಸಾಗುವಳಿ ಮಾಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ನನಗೂ ಮತ್ತು 7 ರಿಂದ 13 ನೇ ಪ್ರತಿವಾದಿಗಳಿಗೆ ಆಗುವುದಿಲ್ಲ ಎಂದು ನಾನು ನನ್ನ ತಮ್ಮನನ್ನು ನನ್ನ ವಿಚಾರಣೆ ಪ್ರಾರಂಭವಾದ ಮೇಲೆ ಕರೆದುಕೊಂಡು ಬಂದು ತಕರಾರು ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. 1975 ರಿಂದ 1988 ರವರೆಗೆ ಸಾಯನ್ನವರ್‌ರವರ ಮೇಲೆ ಯಾವುದೇ ದೂರು ಅಥವಾ ಕೇಸನ್ನು ದಾಖಲು

ಮಾಡಿಲ್ಲ ಎಂದರೆ ಸಾಕ್ಷಿ 2014 ರ ಪೂರ್ವದಲ್ಲಿ ನಾನು ಆ ರೀತಿ ಯಾವುದೇ ದೂರು ಅಥವಾ ಕೇಸು ದಾಖಲು ಮಾಡಿಲ್ಲ ಎನ್ನುತ್ತಾರೆ. ಪೈಪ್ ಲೈನ್ ಹಾಕಿಸಿರುವ ಬಗ್ಗೆ ರಶೀದಿ ಏನಾದರೂ ಇದೆಯಾ ಎಂದರೆ ಸಾಕ್ಷಿ ಅದು ನನ್ನ ತಮ್ಮನಿಗೆ ಗೊತ್ತು ಎನ್ನುತ್ತಾರೆ. ನನ್ನ ದಾವೆ ಕಾಲ ಪರಿಮಿತಿ ಮೀರಿದ ದಾವೆ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಆರ್ಥಿಕವಾಗಿ ತೊಂದರೆ ಬಂದಾಗ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ.

19. 2019 ರಲ್ಲಿ ದಾವಾ ಸ್ವತ್ತನ್ನು ನಾವು ಮಾರಾಟಕ್ಕೆ ಇಟ್ಟಿದ್ದೆವು ಎಂದರೆ ಸರಿಯಲ್ಲ. 2019 ರಲ್ಲಿ ಹಿರಿಯರನ್ನು ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ನಾವು ಜಗಳ ಮಾಡಿಕೊಳ್ಳುವ ಜನರಲ್ಲ, ಸಮಸ್ಯೆಯನ್ನು ಬಗೆಹರಿಸಿಕೊಡಿ ಎಂದು ಕೆ.ಎಲ್.ಇ ನಿರ್ದೇಶಕರಾದ ಜಯಾನಂದ ಮುನವಳ್ಳಿರವರನ್ನು ಕೇಳಿದ್ದೆ ಎನ್ನುತ್ತಾರೆ. 1975 ರಿಂದ ಇಲ್ಲಿಯವರೆಗೆ ನಾವು ದಾವಾ ಸ್ವತ್ತಿನ ಮೇಲೆ ಯಾವುದೇ ಸಾಲ ಪಡೆದುಕೊಂಡಿಲ್ಲ. ದಾವಾ ಸ್ವತ್ತಿನಲ್ಲಿ ಬೆಳೆದ ಕಬ್ಬು ಯಾರ ಹೆಸರಿನಲ್ಲಿ ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಭಂದಿಸಿದ ಹಾಗೆ ಬೆಲೆ ಹಾನಿ ಪರಿಹಾರವನ್ನು ನಾವು ಯಾವತ್ತೂ ಸಹ ಪಡೆದುಕೊಂಡಿರುವುದಿಲ್ಲ. ಕಮೀಷನರ್ ರವರ ವರದಿದಲ್ಲಿ ದಾವಾ ಸ್ವತ್ತಿನಲ್ಲಿ ನಾವೇ ಕಬ್ಜೆಯಲ್ಲಿದ್ದೇವೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. 2014 ರಲ್ಲಿ ನಮ್ಮ ಮನೆಯಲ್ಲಿ ಯಾರು ಸಾಗುವಳಿ ಮಾಡುವವರು ಇರಲಿಲ್ಲ ಎಂದು ದಾವಾ ಸ್ವತ್ತಿನ ಸಾಗುವಳಿಯನ್ನು ಸಾಯನ್ನವರ್‌ರವರಿಗೆ ಕೊಟ್ಟಿದ್ದೇವೆ. 2012-13 ರಲ್ಲಿ ನನ್ನತಮ್ಮ ವಿರುಪಾಕ್ಷಿ ರವರು ದಾವಾ ಸ್ವತ್ತನ್ನು ನೋಡಿಕೊಳ್ಳುತ್ತಿದ್ದರು. ನಾನು 2014 ರಲ್ಲಿ ಅವರಿಗೆ ಸ್ವಾಧೀನ ಕೊಟ್ಟ ಬಗ್ಗೆ ಯಾವುದೇ ಕಾಗದ ಪತ್ರ ಮಾಡಿಕೊಂಡಿಲ್ಲ. ಆಗ ಯಾರು ಹಿರಿಯರು ಇರಲಿಲ್ಲ. 2014 ರಲ್ಲಿ ನಾವು ಅವರಿಗೆ ಸ್ವಾಧೀನಕೊಟ್ಟಿಲ್ಲ ಎಂದರೆ ಸರಿಯಲ್ಲ.

20. 1975 ನನ್ನ ತಂದೆ ಮೃತಪಟ್ಟ ದಿನದಿಂದ ಇಲ್ಲಿಯವರೆಗೆ ಸಾಯನ್ನವರ್‌ರವರಿಗೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾವು ಪೈಪ್ ಲೈನ್ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಗೋಕಾಕ್ ನಲ್ಲಿಯೇ ಇದ್ದು, 1975 ರಿಂದ ಅವರೇ

ಸ್ವಾಧೀನದಲ್ಲಿದ್ದರೂ ಸಹ ನಾವೇ ಸಾಗುವಳಿ ಮಾಡುತ್ತಿದ್ದೆವು ಎಂದು 2014 ರಲ್ಲಿಯೇ ಅವರಿಗೆ ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1975 ರಿಂದ 2014 ರವರೆಗೆ ಜಮೀನನ್ನು ಸಾಗುವಳಿ ಮಾಡಿದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. 2014 ರಲ್ಲಿ ದಾವಾ ಸ್ವತ್ತಿನ ಕಬ್ಜೆಯನ್ನು ನಾನೇ ಕೊಟ್ಟಿದ್ದೇನೆ. ಬಸಪ್ಪ ಮಲ್ಲಪ್ಪ ನಾವಿರವರ ಕಡೆಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡು 2014 ರಲ್ಲಿ ಸಾಯನ್ನವರ್‌ರವರಿಗೆ ಕೊಟ್ಟೆ. ಸದರಿ ಬಸಪ್ಪ ಮಲ್ಲಪ್ಪ ನಾವಿರವರ ಜೊತೆಗೆ ನನಗೇನೂ ತಂಟೆ ಇರುವುದಿಲ್ಲ.

21. 2002-2014 ರವರೆಗೆ ಬಸಪ್ಪ ಮಲ್ಲಪ್ಪ ನಾವಿರವರು ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದರು. ಆ ರೀತಿ ಅವರು ಸಾಗುವಳಿ ಮಾಡಿದ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಬಿಟ್ಟರೇ ಬೇರೆ ದಾಖಲೆ ಇಲ್ಲ ಎಂದರೆ ಸರಿ. ಬಸಪ್ಪ ಮಲ್ಲಪ್ಪ ನಾವಿರವರಿಗೆ ಸಾಗುವಳಿ ಮಾಡಲು ಕೊಟ್ಟ ಬಗ್ಗೆ ತೋರಿಸಲು ದಾಖಲೆ ಇಲ್ಲ. ಅವರಿಗೆ ಪಾಲು ನಾತೆಯಿಂದ ಕೊಟ್ಟಿದ್ದೆವು. ಆಗ ಕೆನಾಲ್ ಇದ್ದು, ಅದರಲ್ಲಿ ನೀರು ಬರುತ್ತಿರಲಿಲ್ಲ ಹಾಗಾಗಿ ಪೈಪ್ ಲೈನ್ ಹಾಕಿಸಿದ್ದೆವು. ದಾವಾ ಸ್ವತ್ತಿನಲ್ಲಿ ಕಬ್ಬು ಬೆಳೆದ ಬಗ್ಗೆ ಯಾವುದೇ ದಾಖಲೆ ಇಲ್ಲ. ಬಸಪ್ಪ ನಾವಿರವರು ನನ್ನ ಸಂಭಂದಿ ಎಂದರೆ ಸರಿ. ಅವರು ಮಮದಾಪೂರದಲ್ಲಿ ವಾಸವಿದ್ದರು. ಸಾಯನ್ನವರ್‌ರವರ ಕುಟುಂಬಗಳು ಎಷ್ಟು ಇವೆ ಎಂದು ನನಗೆ ಗೊತ್ತಿಲ್ಲ. 1975 ರಲ್ಲಿ ನನ್ನ ತಂದೆ ಮೃತಪಟ್ಟಾಗಿನಿಂದ ರಿಂದ ಇವತ್ತಿನವರೆಗೂ ನಾನಾಗಲಿ, ನನ್ನ ಸಹೋದರರಾಗಲಿ ದಾವಾ ಸ್ವತ್ತಿಗೆ ಹೋಗಿಲ್ಲ, ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ.

22. 1975 ರಿಂದ ಸಾಯನ್ನವರ್‌ರವರು ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದರೂ ಸಹ ಪ್ರತಿಕೂಲನಾತೆಯಿಂದ ಅವರು ಮಾಲೀಕರಾಗುತ್ತಾರೆ ಎಂದು ನಾನು ಅವರಿಗೆ 2014 ರಲ್ಲಿ ಸ್ವಾಧೀನಕೊಟ್ಟಿದ್ದೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1975 ರಿಂದ 2014 ರವರೆಗೆ ನಾವು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದೇವೆ

ಎಂದು ತಪಸಿ ಗ್ರಾಮದವರು ಯಾರು ಸಹ ಬಂದು ಸಾಕ್ಷ್ಯ ಹೇಳುವುದಿಲ್ಲ ಎಂದರೆ ಸರಿಯಲ್ಲ. ನಾನು ಜಮೀನು ಸಾಗುವಳಿ ಮಾಡಿದ್ದಾರೆ ಎಂದು ಹೇಳಿದ ವ್ಯಕ್ತಿಗಳು ಯಾವತ್ತೂ ಸಹ ದಾವಾ ಸ್ವತ್ತಿನ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ನಾನು ಜನರನ್ನು ಕರೆದುಕೊಂಡು ದಾವಾ ಸ್ವತ್ತಿನ ಬಳಿ ಬಂದು ಸಾಯನ್ನವರ್‌ರವರನ್ನು ಅನಧೀಕೃತವಾಗಿ ಹೊರಹಾಕಲು ಪ್ರಯತ್ನ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಗ ಅವರು ದೂರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾನೇ ಮೊದಲು ಕೊಟ್ಟಿದ್ದೇನೆ ಎನ್ನುತ್ತಾರೆ. ಆ ನಂತರ ಪಿ ಎಸ್ ಐ ರವರು ಸ್ಥಳಕ್ಕೆ ಹೋಗಿ ಅಲ್ಲಿ 50 ವರ್ಷಗಳಿಂದ ಸಾಯನ್ನವರ್ ರವರೇ ಸ್ವಾ ದೀದಲ್ಲಿದ್ದಾರೆ ಎಂದು ಅಲ್ಲಿಂದ ಜನರ ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

23. 1975 ರಿಂದ ಇಲ್ಲಿಯವರೆಗೆ ನಾವು ದಾವಾ ಸ್ವತ್ತಿನ ಕಬ್ಜೆಯಲ್ಲಿಲ್ಲ ಎಂದು ಕಂದಾಯವನ್ನು ಕಟ್ಟಿಲ್ಲ ಎಂದರೆ ಸಾಕ್ಷಿ ನನ್ನ ತಾಯಿ ಹೆಣ್ಣುಮಗಳಾಗಿದ್ದು, ಬೇರೆಯವರ ಕಡೆಯಿಂದ ಹಣ ಕೊಟ್ಟು ಕಳುಹಿಸುತ್ತಿದ್ದರು, ಅವರು ಪಾವತಿ ರಶೀದಿ ಕೊಟ್ಟು ಕಳುಹಿಸಿಲ್ಲ ಎನ್ನುತ್ತಾರೆ. 1975 ರಿಂದ ನೀವು ಸ್ವಾಧೀನದಲ್ಲಿದ್ದೀರಿ ಎಂದು ತೋರಿಸಲು ಏನು ದಾಖಲೆಗಳನ್ನು ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ 2003 ರಿಂದ 2019 ರವರೆಗೆ ಇ.ಸಿ ಯನ್ನು ಹಾಜರು ಪಡಿಸಿದ್ದೇವೆ ಎನ್ನುತ್ತಾರೆ. ನನ್ನ ತಾಯಿ ಮಾರ್ಚ್-1998 ರಲ್ಲಿ ಮೃತಪಟ್ಟಿದ್ದಾರೆ. ದಾವಾ ಸ್ವತ್ತಿನಿಂದ 1 ನೇ ಪ್ರತಿವಾದಿಯನ್ನು ಬಿಡಿಸಿ ಬೇರೆಯವರಿಗೆ ಮಾರಾಟ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ09.04.1958 ರ ದಾನಪತ್ರದಲ್ಲಿ ಚೆಕ್‌ಬಂದಿ ನಮೂದು ಮಾಡಿದ್ದಾರಾ ಎಂದರೆ ಸಾಕ್ಷಿ ಆಸ್ತಿ ಸಂಖ್ಯೆ ಹಾಕಿದ್ದಾರೆ, ಹೆಸರು ಹಾಕಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ಕೊಟ್ಟಿರುವ ಚೆಕ್‌ಬಂದಿ ರುಜುವಾತು ಪಡಿಸಲು ದಾಖಲೆ ಕೊಟ್ಟಿಲ್ಲ. ನನ್ನ ಉಳಿದ ಸಹೋದರರು ದಾವೆ ಹಾಕುವುದು ಬೇಡ, ಅವರೇ ಉಳುಮೆ ಮಾಡಿ ಅವರೇ ಸಾಗುವಳಿ ಮಾಡಿಕೊಳ್ಳಲಿ ಎಂದು ಹೇಳಿದರೂ ಸಹ ನಾನೇ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಅವರ

ಕುಟುಂಬದವರು ಪ್ರತಿಕೂಲನಾತೆಯಿಂದ ದಾವಾ ಸ್ವತ್ತಿನ ಮಾಲೀಕರಾಗಿದ್ದು, ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 2014 ರಲ್ಲಿ ನಾವು 1 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಕಬ್ಜೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ1 ರಿಂದ 34 ನಮ್ಮ ಸ್ವಾಧೀನವನ್ನು 1975 ರಿಂದ ತೋರಿಸುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ